ವಿಷಯ:- ಬಟ್ವಾಳ ತಾಲ್ಲೂಕಿನ ಸರಪಾಡಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಧನಂಜಯಶೆಟ್ಟಿ ಇವರ ವಿರುದ್ಧ ಕ್ರಮ ಜರುಗಿಸುವ ಕುರಿತು.

ಗ್ರಾಅಪ:892:ಗ್ರಾಪಂಅ:2017

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ದಕ್ಷಿಣ ಕನ್ನಡ ಜಿಲ್ಲೆ ರವರು ದಿನಾಂಕ : 14.07.2017 ಮತ್ತು 29.07.2017 ರಂದು ಸಲ್ಲಿಸಿರುವ ಪತ್ರವನ್ನು ದಯವಿಟ್ಟು ಅವಗಾಹಿಸುವುದು.

2) ಶ್ರೀ. ಧನಂಜಯಶೆಟ್ಟಿ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯಿತಿ, ಬಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರು ಗ್ರಾಮ ಪಂಚಾಯಿತಿಯಿಂದ ಮರಳುಗಾರಿಕೆಗೆ ಅನುಮತಿ ನೀಡಲು ಅವಕಾಶವಿಲ್ಲದಿದ್ದರು ಶ್ರೀ. ಧನಂಜಯಶೆಟ್ಟಿ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯಿತಿ, ಬಟ್ವಾಳ ತಾಲ್ಲೂಕು ರವರು ನೇತ್ರಾವತಿ ನದಿಯಿಂದ ಮರಳು ತೆಗೆಯುವ ಬಗ್ಗೆ ನೀರಾಕ್ಷೇಪಣಾ ಪತ್ರ ಪಡೆದು 2013ನೇ ನವೆಂಬರ್ ಮತ್ತು ಡಿಸೆಬಂರ್ ತಿಂಗಳ ಬಾಬ್ತು ತಿಂಗಳಿಗೆ ಸಾವಿರದಂತೆ ಒಟ್ಟು ಎರಡು ಸಾವಿರ ರೂಗಳನ್ನು ಅಭಿವೃದ್ಧಿ ಶುಲ್ಕವಾಗಿ ಗ್ರಾಮ ಪಂಚಾಯಿತಿಗೆ ಪಾವತಿಸಿರುವುದರಿಂದ ಮೇಲ್ನೋಟಕ್ಕೆ ಕರ್ತವ್ಯಲೋಪವೆಸಗಿರುವುದು ಕಂಡು ಬಂದಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43ಎ ರಡಿ ಕ್ರಮ ಕೈಗೊಳ್ಳುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

3) ಶ್ರೀ. ಧನಂಜಯಶೆಟ್ಟಿ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯಿತಿ, ಬಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರಿಗೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳ ಅನುಮೋದನೆಯೊಂದಿಗೆ ಕಾರಣ ಕೇಳುವ ನೋಟೀಸ್ ನೀಡಬಹುದಾಗಿದೆ. ಅದರಂತೆ ಕರಡು ಕಾರಣ ಕೇಳುವ ನೋಟೀಸ್‌ನ್ನು ಅನುಮೋದನೆಗಾಗಿ ಮಂಡಿಸಿದೆ.

8/8/17

8/8

ವಿಷಯ:- ಬಟ್ವಾಳ ತಾಲ್ಲೂಕಿನ ಸರಪಾಡಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಧನಂಜಯಶೆಟ್ಟಿ ಇವರ ವಿರುದ್ಧ ಕ್ರಮ ಜರುಗಿಸುವ ಕುರಿತು.

ಗ್ರಾಅಪ:892:ಗ್ರಾಪಂಅ:2017

ಕಾರಣ ಕೇಳಿ ನೋಟೀಸನ್ನು ಜಾರಿಗೊಳಿಸಲು ಒಪ್ಪಿದೆ.

ನಿರ್ದೇಶಕರು (ಪಂ.ರಾಜ್-1)

07) ಅಧೀನ ಕಾರ್ಯದರ್ಶಿ)

08) 10/9/2017

09)

11/8/17

10)

ವಿಷಯ:- ಬಂಟ್ವಾಳ ತಾಲ್ಲೂಕಿನ ಸರಪಾಡಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಧನಂಜಯಶೆಟ್ಟಿ ಇವರ ವಿರುದ್ಧ ಕ್ರಮ ಜರುಗಿಸುವ ಕುರಿತು.

ಗ್ರಾಅಪ:892:ಗ್ರಾಪಂಅ:2017

12) ಶ್ರೀ ಧನಂಜಯಶೆಟ್ಟಿ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯಿತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರು ದಿನಾಂಕ 05.09.2017 ರಂದು ಕಾರಣ ಕೇಳುವ ನೋಟಿಸ್‌ಗೆ ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ದಯವಿಟ್ಟು ಅವಗಾಹಿಸುವುದು.

13) ಶ್ರೀ. ಧನ್ನಂಜಯಶೆಟ್ಟಿ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯಿತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರು, ತಮ್ಮ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಅಂಶಗಳನ್ನು ತಿಳಿಸಿರುತ್ತಾರೆ.

- ಶ್ರೀ ಪೂವಪ್ಪ ಪೂಜಾರಿ, ಶ್ರೀ ದಿನೇಶ್ ಮತ್ತು ನಾನು ಮರಳು ತೆಗೆಯಲು ನಿರಾಕ್ಷೇಪನಾ ಪತ್ರ ನೀಡಲು ಸರಪಾಡಿ ಗ್ರಾಮ ಪಂಚಾಯತ್‌ಗೆ ದಿನಾಂಕ 03.09.2013 ರಂದು ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯನ್ನು ದಿನಾಂಕ 01.10.2013 ರಂದು ಸರಪಾಡಿ ಗ್ರಾಮ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿಟ್ಟು ಸದರಿ ಸಭೆಯಲ್ಲಿ ನಿರ್ಣಯ ಸಂಖ್ಯೆ: 133/2013-14 ರಂತೆ ನಿರ್ಣಯ ಕೈಗೊಂಡಿರುತ್ತಾರೆ.
- ನಿರಾಕ್ಷೇಪಣಾ ಅರ್ಜಿಯ ಬಗ್ಗೆ ಸ್ಥಳ ತನಿಖೆ ನಡೆಸಿ ಸೂಕ್ತ ದಾಖಲೆಗಳನ್ನು ಪಡೆದು ಕಡ್ಡಾಯ ಷರತ್ತುಗಳೊಂದಿಗೆ ನಿರಾಕ್ಷೇಪಣಾ ಪತ್ರ ನೀಡುವುದೆಂದು ತೀರ್ಮಾನಿಸಲಾಯಿತು. ಗ್ರಾಮ ಪಂಚಾಯತ್ ಅಧ್ಯಕ್ಷರು ಈ ಚರ್ಚೆಯಲ್ಲಿ ಭಾಗವಹಿಸಿರುವುದಿಲ್ಲ.
- ಗ್ರಾಮ ಪಂಚಾಯತಿಗೆ ಮರಳು ತೆಗೆಯಲು ಅಥವಾ ಸಾಗಿಸಲು ಪರವಾನಿಗೆ ನೀಡುವ ಅಧಿಕಾರ ಇರುವುದಿಲ್ಲ. ಆದರೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಕಲಂ 107 ರ ಪ್ರಕಾರ ಗ್ರಾಮ ಪಂಚಾಯತಿಯಿಂದ ಒಪ್ಪಿಗೆಯನ್ನು ಪಡೆಯದ ಹೊರತು, ಅಂಥ ಕ್ರಮ ಕೈಗೊಳ್ಳತಕ್ಕದ್ದಲ್ಲ ಎಂದು ಇರುತ್ತದೆ.
- ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಮಂಗಳೂರು ರವರಿಂದ ಕ್ವಾರಿಯಿಂಗ್ ಪರ್ಮಿಟ್ ನಂ 255/2009-10 ದಿನಾಂಕ 27.01.2010 ನ್ನು ಸರಪಾಡಿ ಗ್ರಾಮದ ಸರ್ವೆ ನಂ 104 ರ ಭಾಗದ ಒಮದು ಎಕರೆಯಲ್ಲಿ ನೇತ್ರಾವತಿ ನದಿಯಿಂದ ಮರಳು ತೆಗೆದು ಸಾಗಣೆ ಮಾಡಲು ಅನುಮತಿ ಪಡೆದು ರಾಜಧನವನ್ನು ಸಹ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಪಾವತಿ ಮಾಡಿರುತ್ತೇನೆ.
- ಮೇಲ್ಕಂಡ ಕಂಡಿಕೆಗಳಲ್ಲಿ ವಿವರವಾಗಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮು.ಕಾ.ನಿರವರ ಸಲ್ಲಿಸಿರುವ ವರದಿಯನ್ನು ರದ್ದುಪಡಿಸಿ, ಕಾರಣ ಕೇಳುವ ನೋಟಿಸ್‌ನ್ನು ಹಿಂಪಡೆಯಬೇಕೆಂದು ಪ್ರಾರ್ಥಿಸಿರುತ್ತಾರೆ.

14) ಸದರಿ ಪ್ರಕರಣದಲ್ಲಿ ವಿಚಾರಣಾ ದಿನಾಂಕ ಮತ್ತು ಸಮಯ ನಿಗಧಿಪಡಿಸಬಹುದಾಗಿದೆ.

3/11/17

15) 3/11/2017 16) 4/11/17

ವಿಷಯ:- ಬಟ್ವಾಳ ತಾಲ್ಲೂಕಿನ ಸರಪಾಡಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಧನಂಜಯಶೆಟ್ಟಿ ಇವರ ವಿರುದ್ಧ ಕ್ರಮ ಜರುಗಿಸುವ ಕುರಿತು.

ಗ್ರಾಅಪ:892:ಗ್ರಾಪಂಅ:2017

17) ಕಂಡಿಕೆ 14 ರ ಬಗ್ಗೆ ಕ್ರಮವಹಿಸಲು ಮಂಡಿಸಿದೆ

4/11/17

18) ನಿರ್ದೇಶಕರು ಪಂ. ರಾಜ್-1

ದಿನಾಂಕ ಮತ್ತು ಸಮಯವನ್ನು ಕೋರಿದೆ.

[illegible] 11/17

ನಿರ್ದೇಶಕರು (ಪಂ.ರಾಜ್-1)

19) ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)

ದಿನಾಂಕ: 11/12/2017 ರಂದು ಅಪರಾಹ್ನ 3.00ಕ್ಕೆ ವಿಚಾರಣೆಯನ್ನು ನಿಗದಿಪಡಿಸುತ್ತೇನೆ ಮಾನ್ಯ ಶ್ರೀ.ಕಾ. ರವರು ತಿಳಿಸಿರುತ್ತಾರೆ.

29/11

20) D11 P.R.I. - OOD, 29/11/17

21) [illegible]

29/11

22) [illegible] 29/11 [illegible]

**ವಿಷಯ:-** ಬಂಟ್ವಾಳ ತಾಲ್ಲೂಕಿನ ಸರಪಾಡಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಧನಂಜಯಶೆಟ್ಟಿ ಇವರ ವಿರುದ್ಧ ಕ್ರಮ ಜರುಗಿಸುವ ಕುರಿತು.

ಗ್ರಾಅಪ:892:ಗ್ರಾಪಂಅ:2017

23) ದಿನಾಂಕ 11/12/2017 ರಂದು ವಿಚಾರಣೆಯನ್ನು ನಿಗದಿ ಪಡಿಸಲಾಗಿದ್ದು, ಅದರಂತೆ ವಿಚಾರಣಾ ತಿಳುವಳಿಕೆ ಪತ್ರ ಹೊರಡಿಸಿ ನೀಡಿದೆ.

[signature] 30/11/17

24) ಪಿ.ಎ) [signature] 30/11

25) ~~ಪಿ.ಎ)~~ ದ. ಹೊರಡಿಸಿ [signature] 30/11/17

[signature] 30/11/2017

ನೋಡಿದೆ.

26) ದಿನಾಂಕ: 11-12-2017ರಂದು ವಿಚಾರಣೆ ನಡೆಸಲಾಗಿ, ಸಹಾಯಕ ಯೋಜನಾಧಿಕಾರಿ, ಜಿ.ಪಂ. ದಕ್ಷಿಣ ಕನ್ನಡ ಜಿಲ್ಲೆ, ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ. ಬಂಟ್ವಾಳ, ಪಂ.ಅ.ಅ. ಸರಪಾಡಿ ಗ್ರಾ.ಪಂ ಹಾಗೂ ಆಪಾದಿತ ಸದಸ್ಯರಾದ ಶ್ರೀ ಧನಂಜಯ ಶೆಟ್ಟಿ ಹಾಜರಾಗಿರುತ್ತಾರೆ. ಸದಸ್ಯರು ತಮ್ಮ ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

ಆದೇಶಕ್ಕಾಗಿ ~~ಮುಂದೂಡಿದೆ~~ ಮುಂದೂಡಲಾಗಿದೆ

[signature] 12/12/17

27) ಪಿ.ಎ) ಆಪಾದಿತ ಸದಸ್ಯರುಗಳು ನೀಡಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ ಮಂಡಿಸಿ.

[signature] 12/12

(ಆದೇಶ ಮಂಡಿಸಿ)

28) ಸರಪಾಡಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರಾದ ಶ್ರೀ ಧನಂಜಯಶೆಟ್ಟಿ ರವರು ದಿನಾಂಕ:11–12–2017 ರಂದು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡಂತೆ ವಿವರಿಸಿರುತ್ತಾರೆ (ಪು.193–196)

29) ನೇತ್ರಾವತಿ ನದಿ ಕಿನಾರೆಯಲ್ಲಿ ಹೊಯಿಗೆ (ಮರಳು) ತೆಗೆಯಲು ಗ್ರಾಮ ಪಂಚಾಯತಿಗೆ ಪರವಾನಗಿ ನೀಡುವ ಅಧಿಕಾರ ಇರುವುದಿಲ್ಲ. ಆದರೆ ಗ್ರಾಮ ಪಂಚಾಯತಿಗೆ ಮರಳು ತೆಗೆಯಲು ನಿರಾಕ್ಷೇಪಣಾ ಪತ್ರ ನೀಡಲು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಕಲಂ 107ರ ಪ್ರಕಾರ ಅಧಿಕಾರ ಇರುತ್ತದೆ. ಸದರಿ ಕಲಂನ ಉದ್ಧೃತಾ ಭಾಗ ಈ ಕೆಳಕಂಡಂತೆ ಇರುತ್ತದೆ.

"**ಕಲಂ 107:**– ಅಪಾಯಕಾರಿ ಕಲ್ಲು ಗಣಿ ಕೆಲಸ – ಯಾವುದೇ ಕಲ್ಲು ಗಣಿಯ ಕೆಲಸವು ಅಥವಾ ಯಾವುದೇ ಸ್ಥಳದಲ್ಲಿ ಭೂಮಿಯಿಂದ ಕಲ್ಲು, ಮಣ್ಣು ಅಥವಾ ಇತರ ವಸ್ತುಗಳನ್ನು ಸಾಗಿಸುವುದು".

"ಪರಂತು, ಕಲ್ಲುಗಣಿಯು ಅಥವಾ ಅಂಥ ಸ್ಥಳವು ಸರ್ಕಾರದಲ್ಲಿ ನಿಹಿತವಾಗಿದ್ದರೆ ಅಥವಾ ಅದರ ಮೇಲೆ ತಿಳಿಸಿದಂತಹ ಕೆಲಸವನ್ನು ಅಥವಾ ತೆಗೆಯುವಿಕೆಯನ್ನು ಸರ್ಕಾರವು ಅಧಿಕಾರ ನೀಡಿರುವ ಯಾವನೇ ವ್ಯಕ್ತಿ ಅಥವಾ ಹಾಗೆ ಕಾರ್ಯನಿರ್ವಹಿಸುತ್ತಿರುವ ಸರ್ಕಾರದ ಯಾವನೇ ಅಧಿಕಾರಿಯ ಅನುಮತಿ ಪಡೆದು ನಡೆಸಲಾಗುತ್ತಿದ್ದರೆ, ಗ್ರಾಮ ಪಂಚಾಯತಿಯು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರ ಅಥವಾ ಈ ಬಗ್ಗೆ ಅವರು ಅಧಿಕಾರ ನೀಡಿರುವ ಅಧಿಕಾರಿಯ ಒಪ್ಪಿಗೆಯನ್ನು ಪಡೆಯದ ಹೊರತು, ಅಂಥ ಕ್ರಮ ಕೈಗೊಳ್ಳತಕ್ಕದ್ದಲ್ಲ" ಎಂದು ಪ್ರಾವಧಾನ ಇರುತ್ತದೆ.

30) ಮೇಲ್ಕಂಡ ಕಲಂ 107ರ ಪ್ರಕಾರ ನಾನು ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಮಂಗಳೂರು ಇವರಿಂದ ಕ್ವಾರಿಯಿಂಗ್ ಪರ್ಮಿಟ್ ನಂ. 255/2009–10 ದಿನಾಂಕ: 27–01–2010 ನ್ನು ಸರಪಾಡಿ ಗ್ರಾಮದ ಸರ್ವೇ ನಂ. 104ರ ಭಾಗದ 1 ಎಕರೆಯಲ್ಲಿ ನೇತ್ರಾವತಿ ನದಿಯಿಂದ ಮರಳು ತೆಗೆದು ಸಾಗಣೆ ಮಾಡಲು ಕರ್ನಾಟಕ ಮೈನರ್ ಮಿನರಲ್ಸ್ ಕನ್ಸೆಷನ್ ರೂಲ್ಸ್, 1994ರ ನಿಯಮ 21–ಎ ರ ಪ್ರಕಾರ ಪರ್ಮಿಟನ್ನು ಪಡೆದು ರಾಜಧನವನ್ನು ಸಹ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಪಾವತಿಸಿರುತ್ತೇನೆ. ಸದರಿ ಕ್ವಾರಿಯಿಂಗ್ ಪರ್ಮಿಟನ್ನು ನನ್ನ ವಿವರಣೆಯೊಂದಿಗೆ ಅನುಬಂಧ–ಡಿ ಎಂದು ಗುರುತಿಸಿ ಲಗತ್ತಿಸಿ ಸಲ್ಲಿಸಿರುತ್ತೇನೆ. ಗೌರವಾನ್ವಿತರಾದ ತಾವು ದಯಮಾಡಿ ಅನುಬಂಧ–ಡಿ ಯನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕಾಗಿ ಕೋರುತ್ತೇನೆ.

31) ಮೇಲ್ಕಂಡ ಪರ್ಮಿಟ್‌ನ ಕಂಡಿಕೆ 5 ರಲ್ಲಿ ವಿವರಿಸಿರುವಂತೆ ನಾನು ದಿನಾಂಕ: 03–09–2013 ರಂದು ಸರಪಾಡಿ ಗ್ರಾಮ ಪಂಚಾಯತ್‌ಗೆ ಸಲ್ಲಿಸಿದ್ದ ಅರ್ಜಿಯನ್ವಯ ದಿನಾಂಕ: 01–10–2013 ರಂದು ಸರಪಾಡಿ ಗ್ರಾಮ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ನಿರ್ಣಯ ಸಂಖ್ಯೆ: 133/2013–14 ರಂತೆ ನಿರ್ಣಯ ಕೈಗೊಂಡು ಠರಾವನ್ನು ಹೊರಡಿಸಿದನ್ವಯ

ವಿಷಯ:- ಬಂಟ್ವಾಳ ತಾಲ್ಲೂಕಿನ ಸರಪಾಡಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಧನಂಜಯಶೆಟ್ಟಿ ಇವರ ವಿರುದ್ಧ ಕ್ರಮ ಜರುಗಿಸುವ ಕುರಿತು.

ಗ್ರಾಅಪ:892:ಗ್ರಾಪಂಅ:2017

ದಿನಾಂಕ: 09-12-2013 ರಂದು ಮರಳು ಸಂಗ್ರಹಿಸಿದ ಅಭಿವೃದ್ಧಿ ಕೆಲಸಗಳ ಬಾಬತ್ತು ನವೆಂಬರ್ 2013 ಮತ್ತು ಡಿಸೆಂಬರ್ 2013ರ ಮಾಹೆಗಳಿಗೆ ಸಂಬಂಧಿಸಿದಂತೆ ರೂ. 2000.00 ಗಳನ್ನು ರಸೀದಿ ಸಂಖ್ಯೆ: 48683 ರ ಮೂಲಕ ಕಟ್ಟಿಸಿಕೊಂಡು ಈ ಕೆಳಕಂಡಂತೆ ನಿರ್ಣಯ ಕೈಗೊಂಡಿರುತ್ತಾರೆ.

"ಪೂವಪ್ಪ ಪೂಜಾರಿ ಬಿನ್ ಸಂಗಪ್ಪ ಪೂಜಾರಿ ಕಡಮ್ಮಜೆ, ಧನಂಜಯ ಶೆಟ್ಟಿ ಬಿನ್ ಸುಬ್ಬಣ್ಣ ಶೆಟ್ಟಿ, ದಿನೇಶ್ ಬಿನ್ ಆನಂದ ಶೆಟ್ಟಿ ಬಜ, ಮಣಿ ನಾಲ್ಕೂರು ಇವರು ನೇತ್ರಾವತಿ ನದಿಯಿಂದ ಮರಳು ತೆಗೆಯಲು ನಿರಾಕ್ಷೇಪಣಾ ಪತ್ರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಸ್ಥಳ ತನಿಖೆ ನಡೆಸಿ ಸೂಕ್ತ ದಾಖಲೆಗಳನ್ನು ಪಡೆದು ಕಡ್ಡಾಯ ಷರತ್ತುಗಳೊಂದಿಗೆ ನಿರಾಕ್ಷೇಪಣಾ ಪತ್ರ ನೀಡುವುದೆಂದು ತೀರ್ಮಾನಿಸಲಾಯಿತು" ಎಂದು ನಿರ್ಣಯ ಕೈಗೊಂಡಿರುತ್ತಾರೆ.

೩೨) ಮೇಲ್ಕಂಡ ನಿರ್ಣಯದನ್ವಯ ಸರಪಾಡಿ ಗ್ರಾಮ ಪಂಚಾಯತ್ ನಿಂದ ದಿನಾಂಕ: 20-12-2013 ರಂದು ನಿರಾಕ್ಷೇಪಣಾ ಪತ್ರವನ್ನು ಪಡೆದು ಕ್ವಾರಿಯಿಂಗ್ ಪರ್ಮಿಟ್ ಅನುಬಂಧ-ಡಿ ರ ಕ್ರಮಸಂಖ್ಯೆ: 20ರ ವಿಶೇಷ ಷರತ್ತಿನಲ್ಲಿ ವಿವರಿಸಿರುವಂತೆ ರಾಜ್ಯದ ಗ್ರಾಮಾಂತರ ಗಡಿ ಭಾಗದಲ್ಲಿ ಕಾಮಗಾರಿಗೆ ಸಂಬಂಧಿಸಿದ ಗ್ರಾಮ ಪಂಚಾಯತ್ ಕಾರ್ಯದರ್ಶಿ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳಿಂದ ಅನುಮೋದನಾ ಪತ್ರವನ್ನು ಪಡೆದು ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಇವರ ಕಛೇರಿಗೆ ಸಲ್ಲಿಸತಕ್ಕದ್ದೆಂದು ಸೂಚಿಸಿದ್ದನ್ವಯ ದಿನಾಂಕ: 09-12-2013 ರಂದು ನನ್ನಿಂದ ರೂ. 2,000.00 ಗಳನ್ನು ನವೆಂಬರ್ 2013 ಮತ್ತು ಡಿಸೆಂಬರ್ 2013ರ ಮಾಹೆಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ರಸೀದಿ ದಿನಾಂಕ: 09-12-2013 ಅನುಬಂಧ-ಎಫ್ ರ ಮೂಲಕ ಕಟ್ಟಿಸಿಕೊಂಡು, ದಿನಾಂಕ: 20-12-2013ರ ಸರಪಾಡಿ ಗ್ರಾಮ ಪಂಚಾಯತ್ ನ ನಿರಾಕ್ಷೇಪಣಾ ಪತ್ರ ಅನುಬಂಧ-ಜಿ ಯನ್ನು ನೀಡಿರುತ್ತಾರೆ. ಮುಂದುವರಿದ ಪರ್ಮಿಟ್ ಸಂಖ್ಯೆ: 119/2013-14 ದಿನಾಂಕ: 08-10-2013/3124 ನ್ನು ಸರಪಾಡಿ ಗ್ರಾಮದ ಸರ್ವೇ ನಂ. 104/1ಎ1 ರ ಒಂದು ಎಕರೆ ವಿಸ್ತೀರ್ಣದಲ್ಲಿ ನೇತ್ರಾವತಿ ನದಿ ಕಿನಾರೆಯಿಂದ ಮರಳು ತೆಗೆಯಲು ಕ್ವಾರಿಯಿಂಗ್ ಪರ್ಮಿಟನ್ನು ದಿನಾಂಕ: 08-10-2013 ರಿಂದ 05-01-2014ರ ಅವಧಿಗೆ ಅಂದರೆ 90 ದಿನಗಳ ಅವಧಿಗೆ ಮಾತ್ರ ರೂ. 30,000.00 ಗಳನ್ನು ಮುಂಗಡ ರಾಜಧನವಾಗಿ ನನ್ನಿಂದ ಕಟ್ಟಿಸಿಕೊಂಡು ಅನುಬಂಧ-ಇ ರ ಕ್ವಾರಿಯಿಂಗ್ ಪರ್ಮಿಟನ್ನು ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರು ನೀಡಿರುತ್ತಾರೆ.

ಮಾನ್ಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ದ.ಕ ಜಿಲ್ಲಾ ಪಂಚಾಯತ್, ಮಂಗಳೂರು ಇವರಾಗಲೀ ಅಥವಾ ಪೋಲೀಸ್ ಅಧೀಕ್ಷಕರು, ಪೋಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಮಂಗಳೂರು ಇವರಾಗಲೀ ಸರಪಾಡಿ ಗ್ರಾಮ ಪಂಚಾಯತ್ ಕಛೇರಿಗೆ ಭೇಟಿಕೊಟ್ಟು ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ವಿವರಗಳನ್ನು ಹಾಗೂ ಕ್ರಮಗಳನ್ನು ಪರಿಶೀಲಿಸಿರುವುದಿಲ್ಲ.

೩೩) ಆ ರೀತಿಯಾಗಿ ಪರಿಶೀಲಿಸದೇ ಪೋಲೀಸ್ ಅಧೀಕ್ಷಕರು, ಪೋಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಮಂಗಳೂರು ಇವರ ದಿನಾಂಕ: 25-07-2016ರ ಸುಳ್ಳು ವರದಿಯನ್ನು ಆಧರಿಸಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ದ.ಕ ಜಿಲ್ಲಾ ಪಂಚಾಯತ್,

ವಿಷಯ:- ಬಂಟ್ವಾಳ ತಾಲ್ಲೂಕಿನ ಸರಪಾಡಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಧನಂಜಯಶೆಟ್ಟಿ ಇವರ ವಿರುದ್ಧ ಕ್ರಮ ಜರುಗಿಸುವ ಕುರಿತು.

ಗ್ರಾಅಪ:892:ಗ್ರಾಪಂಅ:2017

ಮಂಗಳೂರು ಇವರು ಅವರ ಪತ್ರ ದಿನಾಂಕ: 14-07-2017 ಮತ್ತು 29-07-2017ರ ಪತ್ರಗಳಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43-ಎ ರನ್ವಯ ನನ್ನನ್ನು ಗ್ರಾಮ ಸದಸ್ಯ ಸದಸ್ಯತ್ವದಿಂದ ತೆಗೆದು ಹಾಕಲು ಪ್ರಸ್ತಾವನೆಯನ್ನು ತಮಗೆ ಸಲ್ಲಿಸಿರುವುದು ಸೂಕ್ತ ಹಾಗೂ ನ್ಯಾಯಸಮ್ಮತವಾಗಿರುವುದಿಲ್ಲ.

34) ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ನಾನು ಕ್ವಾರಿಯಿಂಗ್ ಪರ್ಮಿಟನ್ನು ದಿನಾಂಕ: 27-01-2010 ಮತ್ತು 08-10-2013 ರಂದು ಪಡೆದಿದ್ದು, ತದನಂತರ ಸರಪಾಡಿ ಗ್ರಾಮ ಪಂಚಾಯತ್ ನಿಂದ ದಿನಾಂಕ: 20-12-2013 ರಂದು ನಿರಾಕ್ಷೇಪಣಾ ಪತ್ರವನ್ನು ಪಡೆದಿದ್ದು, ಆ ಅವಧಿಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಾವಧಾನಗಳು ಜಾರಿಗೆ ಬಂದಿರಲಿಲ್ಲ, ಆದರೆ ಸದರಿ ಅಧಿನಿಯಮವು ದಿನಾಂಕ: 25-02-2016 ರಿಂದ ಜಾರಿಗೆ ಬಂದಿರುವುದರಿಂದ ಸದರಿ ಅಧಿನಿಯಮದ ಪ್ರಾವಧಾನಗಳಲ್ಲಿ ಸದರಿ ಪ್ರಾವಧಾನಗಳು ಪೂರ್ವಾನ್ವಯವಾಗುವಂತೆ ಜಾರಿಗೆ ಬಂದಿರುತ್ತವೆ ಎಂದು ವಿಶಿಷ್ಟವಾಗಿ ಹಾಗೂ ನಿರ್ದಿಷ್ಟವಾಗಿ ಹೇಳದೇ ಇರುವುದರಿಂದ ಜನರಲ್ ಕ್ಲಾಸಸ್ ಆಕ್ಟ್, 1897ರ ಕಲಂ 5ರ ಪ್ರಕಾರ ಯಾವುದೇ ಅಧಿನಿಯಮವು ಯಾವ ದಿನಾಂಕದಿಂದ ಜಾರಿಗೆ ಬರುತ್ತದೆ ಎಂದು ಹೇಳದೇ ಇರುವುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಾವಧಾನಗಳು ಅಧಿಸೂಚನೆ ಸಂಖ್ಯೆ: ಗ್ರಾಅಪ/09/ಗ್ರಾಪಂಅ/2016 ದಿನಾಂಕ: 23-02-2016 ರನ್ವಯ ದಿನಾಂಕ: 25-02-2016 ರಿಂದ ಜಾರಿಗೆ ಬಂದಿರುವುದರಿಂದ ಸದರಿ ಅಧಿನಿಯಮದ ಕಲಂ 43-ಎ (v) ರ ಪ್ರಾವಧಾನದ ಅಂಶಗಳು ದಿನಾಂಕ: 08-10-2013 ರಂದು ಅಂದರೆ ಕ್ವಾರಿಯಿಂಗ್ ಪರ್ಮಿಟ್ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಪಡೆದ ದಿನದಂದು ಅಥವಾ ಸರಪಾಡಿ ಗ್ರಾಮ ಪಂಚಾಯತ್ ನಿಂದ ದಿನಾಂಕ: 20-12-2013 ರಂದು ನಿರಾಕ್ಷೇಪಣಾ ಪತ್ರವನ್ನು ಪಡೆದ ದಿನದಂದು ಸದರಿ ಕಲಂ 43-ಎ(v) ರ ಪ್ರಾವಧಾನಗಳು ಜಾರಿಯಲ್ಲಿ ಇಲ್ಲದ ಕಾರಣ ಮಾನ್ಯ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿ, ದ.ಕ ಜಿಲ್ಲಾ ಪಂಚಾಯತ್, ಮಂಗಳೂರು ಇವರು ನನ್ನ ಸದಸ್ಯತ್ವವನ್ನು ರದ್ದುಪಡಿಸಲು ಕಳುಹಿಸಿರುವ ಪ್ರಸ್ತಾವನೆಯು ನಿಲ್ಲತಕ್ಕದಲ್ಲ ಎಂಬ ಅಂಶವನ್ನು ತಮ್ಮಲ್ಲಿ ಗೌರವಪೂರ್ವಕವಾಗಿ ನಿವೇದಿಸುತ್ತೇನೆ.

35) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಕಲಂ 43-ಎ(v) ರ ಪ್ರಾವಧಾನವು ದಿನಾಂಕ: 08-10-2013 ರಂದು 20-12-2013 ರಂದು ಜಾರಿಯಲ್ಲಿ ಇಲ್ಲದೇ ಇದ್ದರೂ ಸಹ ಸದರಿ ಪ್ರಾವಧಾನದಲ್ಲಿ "ಪಂಚಾಯತ್‌ನ ಯಾವುದೇ ಬೇರೆ ರೀತಿಯ ಕಾಮಗಾರಿಯನ್ನು ಕಾರ್ಯಗತಗೊಳಿಸುವಾಗ ಕರಾರು ಸಂಬಂಧದ ಅಥವಾ ಕಾಮಗಾರಿಗೆ ಸಂಬಂಧಿಸಿದ ಯಾವುದೇ ವ್ಯವಹಾರದಲ್ಲಿ ಕುಟುಂಬದ ಹತ್ತಿರದ ಸಂಬಂಧಿಯಾಗಿರುವ ಯಾವೊಬ್ಬ ವ್ಯಕ್ತಿಗೆ ಪ್ರತ್ಯಕ್ಷವಾಗಿ ತೊಡಗಿರುವುದು ಕಂಡು ಬಂದರೆ ಅಥವಾ ಪಾಲುದಾರನಂತೆ, ನೌಕರನಂತೆ ಅಥವಾ ಅನ್ಯಥಾ ಸಂಘ ಸಂಸ್ಥೆಯ ಮಂಡಳಿಯಲ್ಲಿ ಸದಸ್ಯನಂತೆ ಸಹಭಾಗಿಯಾಗಿರುವನೆಂದು ಕಂಡುಬಂದರೆ ಅವನಿಗೆ

ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾನು ಭಾವಿಸಿದಂತಹ ವಿಚಾರಣೆ ಮಾಡಿದ ನಂತರ ತೆಗೆದು ಹಾಕುವುದು ಸೂಕ್ತವೆಂದು ಭಾವಿಸಿದ್ದರೆ ಆ ಸದಸ್ಯನನ್ನು ಆತನ ಸದಸ್ಯತ್ವದಿಂದ ತೆಗೆದು ಹಾಕಬಹುದು ಎಂದು ವಿವರಿಸಲಾಗಿರುತ್ತದೆ". ಈ ಪ್ರಾವಧಾನ ಪ್ರಕಾರ ನಾನಾಗಲೀ ಅಥವಾ ನನ್ನ ಕುಟುಂಬಕ್ಕೆ ಸಂಬಂಧಿಸಿದ ಸಂಬಂಧಿಕರಾಗಲೀ ಸರಪಾಡಿ ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದ ಯಾವುದೇ ರೀತಿಯ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಂಬಂಧ ಕರಾರನ್ನು ಮಾಡಿಕೊಂಡಿರುವುದಿಲ್ಲ ಹಾಗೂ ಯಾವೊಬ್ಬ ವ್ಯಕ್ತಿಯೊಂದಿಗೂ ಸಹ ಯಾವುದೇ ವ್ಯವಹಾರದಲ್ಲಿ ಪಂಚಾಯತಿಗೆ ಸಂಬಂಧಿಸಿದಂತೆ ತೊಡಗಿರುವುದಿಲ್ಲ ಹಾಗೂ ಪಾಲುದಾರನಾಗಿರುವುದಿಲ್ಲ ಮತ್ತು ಸಂಘ ಸಂಸ್ಥೆಯ ಮಂಡಳಿಯಲ್ಲಿಯೂ ಸಹ ಪಂಚಾಯತಿಗೆ ಸಂಬಂಧಿಸಿದಂತೆ ಸದಸ್ಯನಾಗಿ ಭಾಗಿಯಾಗಿರುವುದಿಲ್ಲ ಎಂಬ ಅಂಶವನ್ನು ತಮ್ಮಲ್ಲಿ ಗೌರವಪೂರ್ವಕವಾಗಿ ನಿವೇದಿಸುತ್ತೇನೆ.

ಆದರೆ, ನಾನು ನನ್ನ ವೈಯಕ್ತಿಕ ಹಿನ್ನಲೆಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ನೇತ್ರಾವತಿ ನದಿ ಕಿನಾರೆಯಿಂದ ಮರಳು ತೆಗೆಯಲು ಕ್ವಾರಿಯಿಂಗ್ ಪರ್ಮಿಟ್ ಗಳನ್ನು ಪಡೆದು ಸರಪಾಡಿ ಗ್ರಾಮ ಪಂಚಾಯತ್ ನಿಂದ ಅದಕ್ಕೆ ಅನುಸಾರವಾಗಿ ನಿರಾಕ್ಷೇಪಣಾ ಪತ್ರವನ್ನು ಪಡೆದು ನಾನು ವೈಯಕ್ತಿಕ ವ್ಯವಹಾರದ ವಹಿವಾಟನ್ನು ನಡೆಸಿರುವುದರಿಂದ ಸದರಿ ವೈಯಕ್ತಿಕ ವಹಿವಾಟು ಸರಪಾಡಿ ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಕಾಮಗಾರಿ ಕೆಲಸ ಆಗದೇ ಇರುವುದರಿಂದ ಇದು ನನ್ನ ದುರ್ನಡತೆ ಆಗಿರುವುದಿಲ್ಲ ಮತ್ತು ಅದನ್ನು ದುರ್ನಡತೆ ಎಂದು ಮಾನ್ಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ದ.ಕ ಜಿಲ್ಲಾ ಪಂಚಾಯತ್ ಇವರು ಪರಿಗಣಿಸಿ ತಮಗೆ ಪ್ರಸ್ತಾವನೆ ಸಲ್ಲಿಸಿರುವುದು ಸಹ ನ್ಯಾಯಸಮ್ಮತವಾಗಿರುವುದಿಲ್ಲ ಹಾಗೂ ಮೇಲ್ಕಂಡ ಕಾನೂನಿನ ಅಂಶಗಳಿಗೆ ವ್ಯತಿರಿಕ್ತವಾಗಿರುತ್ತದೆ ಎಂಬ ಅಂಶವನ್ನು ತಮ್ಮಲ್ಲಿ ಗೌರವಪೂರ್ವಕವಾಗಿ ನಿವೇದಿಸುತ್ತೇನೆ.

36) ದಿನಾಂಕ: 08-10-2013 ರಂದು ಅಥವಾ ದಿನಾಂಕ: 20-12-2013 ರಂದು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಾವಧಾನಗಳು ಈ ಕೆಳಕಂಡಂತೆ ಜಾರಿಯಲ್ಲಿದ್ದವು.

"**ಕಲಂ 43-ಎ:- ದುರ್ನಡತೆಗಾಗಿ ಸದಸ್ಯರುಗಳನ್ನು ತೆಗೆದು ಹಾಕುವುದು:-** ಯಾವೊಬ್ಬ ಸದಸ್ಯನು ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ದುರ್ನಡತೆಯ ಅಥವಾ ಯಾವುದೇ ಅಪಕೀರ್ತಿಕರ ನಡತೆಯ ತಪಿತಸ್ಥನಾದರೆ ಅಥವಾ ಸದಸ್ಯನಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥನಾದರೆ ಸರ್ಕಾರವು ಗ್ರಾಮ ಪಂಚಾಯತಿಯ ಶಿಫಾರಸ್ಸಿನ ಮೇಲೆ ಅಥವಾ ಅನ್ಯಥಾ ಆತನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶಗಳನ್ನು ಕೊಟ್ಟ ತರುವಾಯ ಮತ್ತು ತಾನು ಅವಶ್ಯಕವೆಂದು ಭಾವಿಸುವಂತಹ ವಿಚಾರಣೆಯನ್ನು ನಡೆಸಿದ ತರುವಾಯ ಹಾಗೂ ಯಾವೊಬ್ಬ ಸದಸ್ಯನನ್ನು ತೆಗೆದು ಹಾಕುವುದು ಸೂಕ್ತವೆಂದು ಅಭಿಪ್ರಾಯ ಪಟ್ಟರೆ ಹಾಗೇ ತೆಗೆದು ಹಾಕಬಹುದು".

ದಿನಾಂಕ: 14-07-2017 ಮತ್ತು 29-07-2017ರ ಮಾನ್ಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ದ.ಕ ಜಿಲ್ಲಾ ಪಂಚಾಯತ್ ಇವರ ಪ್ರಸ್ತಾವನೆಗಳನ್ನು ರದ್ದುಪಡಿಸಬೇಕಾಗಿ ಮತ್ತು ತಮ್ಮ ಕಾರಣ ಕೇಳುವ ನೋಟೀಸ್ ದಿನಾಂಕ: 11-08-2017 ನ್ನು ಹಿಂಪಡೆಯಬೇಕಾಗಿ ಕೋರಿರುತ್ತಾರೆ.

ವಿಷಯ:- ಬಂಟ್ವಾಳ ತಾಲ್ಲೂಕಿನ ಸರಪಾಡಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಧನಂಜಯಶೆಟ್ಟಿ ಇವರ ವಿರುದ್ಧ ಕ್ರಮ ಜರುಗಿಸುವ ಕುರಿತು.

ಗ್ರಾಅಪ:892.ಗ್ರಾಪಂಅ.2017

37) ಈ ಪ್ರಕರಣವು ಶ್ರೀ ಧನಂಜಯ ಶೆಟ್ಟಿಯವರು 2010-15 ಸಾಲಿನಲ್ಲಿ ಗ್ರಾ.ಪಂ. ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ನಡೆದಿರುತ್ತದೆ. ಸದರಿಯವರು 2015-2020ನೇ ಸಾಲಿನ ಅವಧಿಗೆ ಸದಸ್ಯರಾಗಿ (ಗ್ರಾ.ಪಂ) ಆಯ್ಕೆಯಾಗಿರುತ್ತಾರೆ.

ಆದೇಶಕ್ಕಾಗಿ ಸಲ್ಲಿಸಿದೆ

13/12/17

38) ಪಿ)

> ಸದರಿ ಪ್ರಕರಣವು 2010-2015 ರ ಅವಧಿಯ ಪ್ರಕರಣವಾಗಿದ್ದು, KPR Act 43(A) ರನ್ವಯ ಕ್ರಮ ಕೈಗೊಳ್ಳಲು ಬರುವುದಿಲ್ಲ.

> ಇಂತಹದೇ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾನ್ಯ ಪ್ರ. ಕಾ ರವರ ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಿರುವ ಬಗ್ಗೆ ಕ್ರಮಕ್ಕಾಗಿ ಮಾನ್ಯ ಸರ್ಕಾರದ ಅಭಿಪ್ರಾಯವನ್ನು ಸಲ್ಲಿಸಲಾಗಿದೆ.

> ಸದರಿ ವಿಷಯವನ್ನು ಮಾನ್ಯ ಪ್ರ. ಕಾರ್ಯದರ್ಶಿಯವರ ಅವಗಾಹನೆ ಹಾಗೂ ಆದೇಶಕ್ಕಾಗಿ ಸಲ್ಲಿಸಿದೆ.

13/12/2017

39) ಸ್ಕಾ) ಕಂ.38ರ ಬಗ್ಗೆ ಆದೇಶಕ್ಕಾಗಿ ಮಂಡಿಸಿದೆ

19/12/17

ಅ) ಪಿ (ಹಾಜರು)

ವಿಷಯ:- ಬಟ್ವಾಳ ತಾಲ್ಲೂಕಿನ ಸರಪಾಡಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಧನಂಜಯಶೆಟ್ಟಿ ಇವರ ವಿರುದ್ಧ ಕ್ರಮ ಜರುಗಿಸುವ ಕುರಿತು.

ಗ್ರಾಅಪ:892:ಗ್ರಾಪಂಅ:2017

41) ಶ್ರೀ ಧನಂಜಯ ಶೆಟ್ಟಿ, ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯತಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ~~ಹೊಯಿಗೆ(ಮರಳು) ಪರವಾನಿಗೆ ಕೊಟ್ಟಿದ್ದು, ಅದರಿಂದ ಸರ್ಕಾರಕ್ಕೆ ಪಾವತಿಸುವ ಶುಲ್ಕ ಸಂದಾಯವಾಗಿರುವುದಿಲ್ಲ ಎಂದು ಶ್ರೀ ದರ್ಣಪ್ಪ ಮುಗೇರ ಎಂಬುವವರು ಶ್ರೀ ಧನಂಜಯ ಶೆಟ್ಟಿಯವರ ವಿರುದ್ಧ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರಿಗೆ~~ ದೂರು ಸಲ್ಲಿಸದ್ದು, ಈ ದೂರಿಗೆ ಸಂಬಂಧಿಸಿದಂತೆ ಸದರಿಯವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ರವರು ಸರ್ಕಾರಕ್ಕೆ ಸೂಚಿಸಿದ್ದು, ಅದರಂತೆ ಜಿಲ್ಲಾ ಪಂಚಾಯತಿಯಿಂದ ವಿವರಣೆ ಪಡೆಯಲಾಗಿದ್ದು, ಗ್ರಾಮ ಪಂಚಾಯತಿಯಿಂದ ಮರಳುಗಾರಿಕೆ ಬಗ್ಗೆ ಅನುಮತಿ ನೀಡಲು ಅವಕಾಶವಿಲ್ಲದಿದ್ದರೂ, ಶ್ರೀ ಧನಂಜಯಶೆಟ್ಟಿ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು, ಸರಪಾಡಿ ಗ್ರಾಮ ಪಂಚಾಯತಿ, ಬಟ್ವಾಳ ತಾಲ್ಲೂಕು ರವರು ನೇತ್ರಾವತಿ ನದಿಯಿಂದ ಮರಳು ತೆಗೆಯುವ ಬಗ್ಗೆ ನಿರಾಕ್ಷೇಪಣಾ ಪತ್ರ ~~ಪಡೆದು 2013ನೇ ನವೆಂಬರ್ ಮತ್ತು ಡಿಸೆಂಬರ್ ತಿಂಗಳ ಬಾಬ್ತು ತಿಂಗಳಿಗೆ ಸಾವಿರದಂತೆ ಒಟ್ಟು~~ ಎರಡು ಸಾವಿರ ರೂಗಳನ್ನು ಅಭಿವೃದ್ಧಿ ಶುಲ್ಕವಾಗಿ ಗ್ರಾಮ ಪಂಚಾಯಿತಿಗೆ ಪಾವತಿಸಿರುವುದರಿಂದ ಮೇಲ್ನೋಟಕ್ಕೆ ಕರ್ತವ್ಯಲೋಪವೆಸಗಿರುವುದು ಕಂಡು ಬಂದಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅದಿನಿಯಮ 1993 ರ ಪ್ರಕರಣ 43ಎ ರಡಿ ಕ್ರಮ ಕೈಗೊಳ್ಳುವಂತೆ ಪ್ರಸ್ತಾವನೆ ಸಲ್ಲಿಸಿದ ಮೇರೆಗೆ ಸದರಿಯವರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿ, ಲಿಖಿತ ಹೇಳಿಕೆಯನ್ನು ಪಡೆದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 11-12-2017 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ವಿಚಾರಣೆ ಕರೆಯಲಾಗಿ ವಿಚಾರಣೆ ಮಾಡಿಲಾಯಿತು.

42) ಮಾನ್ಯ ಉಚ್ಚನ್ಯಾಯಾಲಯದ ಪ್ರಕರಣ ಸಂಖ್ಯೆ:16856/2000 ಗೆ ಸಂಬಂಧಿಸಿದಂತೆ ಈರಗಂಟಪ್ಪ ಅಲಿಯಾಸ್ ವೀರಗಂಟಪ್ಪ ವಿರುದ್ಧ ಹನುಮಂತ ಮತ್ತು ಇತರರು 2003(6) Kar.LJ.342(DB)ILR 2003 Kar.3035(DB) ರಲ್ಲಿ ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ಅನ್ವಯ ಸದಸ್ಯನು ಪ್ರಸ್ತುತ ಅವಧಿಯಲ್ಲಿ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗ ಎಸಗಿದ ದುರ್ನಡತೆಗೆ ಮಾತ್ರ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಈ ಪ್ರಕರಣದಲ್ಲಿ ಶ್ರೀ ಧನಂಜಯ ಶೆಟ್ಟಿ ರವರ ವಿರುದ್ಧ ಇರುವ ಆರೋಪವು ಹಿಂದಿನ ಗ್ರಾಮ ಪಂಚಾಯತಿಯ ಸದಸ್ಯತ್ವದ ಅವಧಿಗೆ ಸಂಬಂಧಿಸಿದ್ದಾಗಿರುವುದರಿಂದ ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಹಿನ್ನಲೆಯಲ್ಲಿ ಶ್ರೀ ಧನಂಜಯ ಶೆಟ್ಟಿ ರವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ರಡಿ ಜರುಗಿಸಬೇಕಾದ ವಿಚಾರಣೆಯನ್ನು ಕೈಬಿಟ್ಟು, ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಮಾನ್ಯ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ರವರು ಆದೇಶಿಸಿರುತ್ತಾರೆ. ಅದರಂತೆ ಕರಡು ಆದೇಶ ಮಾನ್ಯ ಸಚಿವರು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಅನುಮೋದನೆಗಾಗಿ ಸಲ್ಲಿಸಿದೆ.

20/12/17

43)

→

→

ವಿಷಯ:- ಬಟ್ವಾಳ ತಾಲ್ಲೂಕಿನ ಸರಪಾಡಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಧನಂಜಯಶೆಟ್ಟಿ ಇವರ ವಿರುದ್ಧ ಕ್ರಮ ಜರುಗಿಸುವ ಕುರಿತು.

ಗ್ರಾಅಪ:892:ಗ್ರಾಪಂಅ:2017

ಕಂಡಿಕೆ 41-42ರ ಅನ್ವಯ ... ಕಂ.42'ಬ'ರ ಬಗ್ಗೆ ...

20/12/17

45) ನಿರ್ದೇಶಕರು ಪಂ. ರಾಜ್-1

ಸದರಿ ಪ್ರಕರಣವು ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ರವರ ನ್ಯಾಯಲಯದಲ್ಲಿ ~~ದಿನಾಂಕ: 19.12.2017 ರಂದು ವಿಚಾರಣೆ ನಡೆದಿದ್ದು, ಆದೇಶದ ದಿನಾಂಕ: 19.12.2017 ರಂತೆ~~ ಉಚ್ಚ ನ್ಯಾಯಲಯದ ರಿಟ್ ಪಿಟಿಷನ್ ಸಂಖ್ಯೆ: 16856/2000 ದಿನಾಂಕ: 03.07.2000 ದ ಆದೇಶದ ಹಿನ್ನಲೆಯಲ್ಲಿ ವಿಚಾರಣೆಯನ್ನು ಕೈಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಿದ್ದು, ಆದೇಶ ಜಾರಿಗೊಳಿಸಲು ಮಾನ್ಯ ಗ್ರಾ.ಅ ಮತ್ತು ಪಂ.ರಾಜ್ ಸಚಿವರ ಅನುಮೋದನೆ ಪಡೆಯಬಹುದಾಗಿದೆ.

ನಿರ್ದೇಶಕರು (ಪಂ.ರಾಜ್-1)

46) ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)

ಡಾ: ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಮಾನ್ಯ ಗ್ರಾ.ಅ ಮತ್ತು ಪಂ.ರಾಜ್ ಸಚಿವರು

ಅನುಮೋದಿಸಿದೆ.

ಎಚ್.ಕೆ. ಪಾಟೀಲ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಸರ್ಕಾರದ (ಪ್ರಧಾನ ಕಾರ್ಯದರ್ಶಿಯವರು)

ಗ್ರಾ.ಅ ಮತ್ತು ಪಂ.ರಾಜ್ ಸಚಿವರ ಕಛೇರಿ
ಸಂಖ್ಯೆ 2629
ಸ್ವೀಕೃತಿ ದಿ: 27/12/17
ರವಾನೆ ದಿ: ..02..2018